Rega No BG 155

— ೨೯ —

29—3—1962

Sri "SATYAVADI"
— DAILY —
MYSORE !
46 th Year

# ಸತ್ಯವಾದಿ
SATYAVADI

ಸ ವ.ಮಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

Protect the cow

ಸ್ಥಾಪಕರು— ಅಂಮನೆ ಸಿಂಸ್ಕೇದಾರ್ ಎಂ. ವಿ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ

ಗೋಸಂರಕ್ಷಣೆ ಮಾಡಿ

## ಮುಂದಿನ ತಿಂಗಳಿನಲ್ಲಿ ತೆರಿಗೆಯ ಸೂಚನೆ

## ರಾಜ್ಯ ಸಬೆಯಲ್ಲಿ ಮೊರಾರ್ಜಿದೇಸಾಯರ ಹೇಳಿಕೆ

### ಮತ್ತೆರಡು ವಿಶ್ವವಿದ್ಯಾನಿಲಯಗಳು

ಮತ್ತೆಂಡು ವಿಶ್ವವಿದ್ಯಾನಿಲಯ ಸ್ಥಾಪಿಸುವ ಸೂಚನೆಯನ್ನು ಮುಖ್ಯಮಂತ್ರಿ ಶ್ರೀ ಎಸ್ ಆರ್ ಕಂಠಿಯವರು ಬೆ ಗಳೂರಿನಲ್ಲಿ ಸೇರಿರುವ ವಿಧಾನ ಸಭೆಯಲ್ಲಿ ನಿನ್ನೆ ತಿಳಿಸಿದರು

### ಯಾತ್ರಿಕ ಗೆ ಅನುಮತಿ

ಮುಂದಿನ ಮಾಹೆ 8ರಿಂದ 16 ರವರಿಗೆ ನಡೆಯುವ ಬಾಯುಸಾಕಿ ಹಬ್ಬದ ಸಂದರ್ಭದಲ್ಲಿ ಪಶ್ಚಿಮ ಪಾಕಿಸ್ತಾನದಲ್ಲಿ ವಿವಿಧ ಗುರುದ್ವಾರಗಳಿಗೆ ಭೇಟಿಕೊಡಲು 250 ಮಂದಿ ಯಾತ್ರಿಕರಿಗೆ ಅನುವು ಮಾಡಿಕೊಡಲಾಗಿದೆ ಎಂದು ಪಾಕಿಸ್ತಾನದ ವಾರ್ತೆ

### ಕೆನೆಡಿ ಆಡಳಿತದ ನಿರ್ಧಾರ

ರಾಷ್ಟ್ರದ ಪ್ರಧಾನ ಹಿತಗಳು ಅಪಾಯದಲ್ಲಿದೆ ಎಂದಾಗ ಪ್ರಥಮ ಅಣು ಪ್ರಯೋಗ ಮಾಡಲು ಅಮೆರಿಕದ ಕೆನೆಡಿ ಆಡಳಿತ ಸಿದ್ಧವಿದೆ ಎಂದು ವಾಷಿಂಗ್ಟನ್ ವಾರ್ತೆ.

### ಪಾಕಿಸ್ತಾನದ ಆರೋಪ

ಪೂರ್ವ ಪಾಕಿಸ್ತಾನದ ಸರ್ಕಾರ ನಿನ್ನೆ ಡಾಕ್ಕಾದಲ್ಲಿ ಪ್ರಕಟಣೆಯೊಂದನ್ನು, ಡಾಕ್ಕಾದಲ್ಲಿ ವಿದ್ಯಾರ್ಥಿಗಳ ಪ್ರದರ್ಶನದ ಬಗ್ಗೆ ಸ್ಥಳೀಯ ಬಂಗಾಳಿ ಪತ್ರಿಕೆಗಳು ಮತ್ತು ಅಖಿಲ ಭಾರತ ರೇಡಿಯೋ ಉತ್ಪ್ರೇಕ್ಷಿತ ವಂದಿ ಕೊಡುತ್ತಿವೆ ಎಂದಿದೆ.

### ರಾಣಿಯವರ ಅಳಿಯನ ಮರಣ

ಸಿಕ್ಕಿಂ ಮಹಾರಾಣಿಯ ಅಳಿಯ ಹಾಗೂ ಕಲ್ಕತ್ತಾ ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿ ಶ್ರೀ ಸೋನಾಂ ತಬ್ದೆ ಸೋಮವಾಂ ಕಲ್ಕತ್ತಾದಲ್ಲಿ ಕಾರಿನಲ್ಲಿ ಹೋಗುತ್ತಿದ್ದಾಗ ಲಾರಿಗೆ ಡಿಕ್ಕಿಯಾಗಿ ಗಾಯಗೊಂಡು ಆಸ್ಪತ್ರೆಯಲ್ಲಿ ಮರಣಹೊಂದಿದರು.

### ಕಾಂಗ್ರೆಸು ಪಕ್ಷದ ಸಭೆ

ನವ ದೆಹಲಿಯಿಂದ ಬಂದಿರುವ ವಂದಿ ಪ್ರಕಾರ ಪಾರ್ಲಿಮೆಂಟು ಕಾಂಗ್ರೆಸು ಪಕ್ಷದ ಹೊಸ ಸದಸ್ಯರ ಸಭೆ ಏಪ್ರಿಲು 3 ನೇ ತಾ|| ಸೇರಿ ನಾಯಕರನ್ನು ಆರಿಸುವುದು

### ಆಸ್ಪತ್ರೆಗೆ ದಾಖಲು

ಅವಿಭಜಿತ ಬಂಗಾಳದ ಮುಖ್ಯಮಂತ್ರಿಯೂ, 80 ವಯಸ್ಸಿನ ರಾಜಕಾರಣಿಯೂ ಆದ ಶ್ರೀ ಎ ಕೆ ಫಜ್ಲುಲ್‌ಹಕ್ ಅರೋಗ್ಯ ತಂಬಾ ಕೆಟ್ಟಿದೆ ಅವರನ್ನು ಡಾಕ್ಕಾದ ಮೆಡಿಕಲ್ ಕಾಲೇಜು ಆಸ್ಪತ್ರೆಗೆ ಸೇರಿಸಿದೆ.

### ರೈಲ್ವೆಯಲ್ಲಿ ಕೊಲೆ

ವರ್ಷವೊಂದಕ್ಕೆ ಸರಾಸರಿ ಕೊಲೆ ಏದಾಂ. ರೈಲಿನಲ್ಲಿ ಆಗುತ್ತಿದೆ ಎಂದು ಲೋಕಸಭೆಯಲ್ಲಿ ನಿನ್ನೆ ರೈಲ್ವೆ ಉಪ ಮಂತ್ರಿ ಶ್ರೀ ಪಾನವಾಜ ಖಾನರು ತಿಳಿಸಿದರು.

### ಆಂಧ್ರದ ಒಪ್ಪಿಗೆ

ಅಡ್ವೋಕೇಟರುಗಳ ಎಕ್ಸಾಮಿನೇಶನ್ ನಲ್ಲಿ ಸ್ಟ್ಯಾಂಪು ಡ್ಯೂಟಿ ಕಡಿಮೆ ಮಾಡಿಕೊಳ್ಳಲು ಆಂಧ್ರ ಸರ್ಕಾರ ಒಪ್ಪಿದೆ.

## ಅಂತ್ಯ ಸರ್ವೆ

ದಕ್ಷಿಣ ಭಾರತದಲ್ಲಿ ಸೇಲಂ—ಜೊಳಾರ್‌ಪೇಟೆ ರೈಲ್ವೆ ಮಾರ್ಗದ ಅಂತ್ಯ ಸರ್ವೆ ಈ ವರ್ಷದ ಕಡೆಯಲ್ಲಿ ಮುಗಿಯುವದೆಂಬುದಾಗಿ ರೈಲ್ವೆ ಉಪ ಮಂತ್ರಿ ಶ್ರೀ ಎಸ್ ಏ ರಾಮಸ್ವಾಮಿಯವರು ನಿನ್ನೆ ಲೋಕಸಭೆಯಲ್ಲಿ ತಿಳಿಸಿದರು.

### ಹೆಚ್ಚು ನೌಕೆಗಳು

ಪಶ್ಚಿಮ ಆಫ್ರಿಕಾಗೆ ಡಚ್ಚರಿಯುದ್ಧ ಹಡಗುಗಳು ಹೆಚ್ಚಾಗಿ ಹೋಗಿರುವದೆಂಬುದಾಗಿ ಹೇಗ್‌ನಿಂದ ವಾರ್ತೆ ಬಂದಿದೆ.

ಭಾರತ ಸರ್ಕಾರದ ಹಣಕಾಸು ಮಂತ್ರಿಯವರಾದ ಶ್ರೀ ಮೊರಾರ್ಜಿ ದೇಸಾಯಿಯವರು ನವ ದೆಹಲಿಯಲ್ಲಿ ಸಮಾವೇಶವಾಗಿರುವ ರಾಜ್ಯ ಸಭೆಯಲ್ಲಿ ನಿನ್ನೆ ಹೇಳಿಕೆಯೊಂದನ್ನು, ಪೂರ್ವಭಾವಿ ತೆರಿಗೆ ಸೂಚನೆಗಳನ್ನು ಮುಂದಿನ ತಿಂಗಳು ಮಂಡಿಸುವದಾಗಿ ತಿಳಿಸಿದರು. ಪ್ರತ್ಯಕ್ಷ ಅಥವಾ ಪರೋಕ್ಷ ತೆರಿಗೆ, ತೆರಿಗೆ ಕ್ರಮ ಇವನ್ನು ಕುರಿತು ಟೀಕೆಗಳ ವಿಷಯದಲ್ಲಿ ಏನೂ ನಿರ್ಧಾರ ಮಾಡಲು ನಿರಾಕರಿಸಿದರು

### ಪಕ್ಕದ ನದಿಗಳಂತೆ

ಭಾರತ ಮತ್ತು ಅಮೆರಿಕ ಇವುಗಳ ಬಾಂಧವ್ಯ ಪಕ್ಕದಲ್ಲಿ ಹರಿಯುವ ಎರಡು ನದಿಗಳಂತಿವೆ, ನದಿ ದಟ್ಟಗಳು ಬದಲಾವಣೆ ಆಗಬಹುದು, ಆದರೆ ಮಾರ್ಗ ಒಂದೇ ಎಂದು ಸ್ಟೂಯಾರ್ಟ್‌ನಲ್ಲಿ ನಿನ್ನೆ ಭಾರತದಲ್ಲಿ ಅಮೆರಿಕ ರಾಯಭಾರಿ ಆಗಿರುವ ಜಾನ್ ಕೆನ್ನಿತ್ ಗಾಲ್ಬ್ರೈತ್‌ರು ತಿಳಿಸಿದರು

### ಕಲ್ಕತ್ತಾ ಮೇಲೆ ಆಕ್ರೋಶ

ಪೆಷಾವರು ವಿಶ್ವವಿದ್ಯಾನಿಲಯದ ಘಟಿಕೋತ್ಸವವನ್ನು ಉದ್ದೇಶಿಸಿ ಪಾಕಿಸ್ತಾನದ ಅಧ್ಯಕ್ಷ ಅಯೂಬ ಖಾನರು ನಿನ್ನೆ ಭಾಷಣಮಾಡುತ್ತಾ, ಪಾಕಿಸ್ತಾನದಲ್ಲಿರುವ ವಿನಾಶಕಾರಕ ಒಲಗಳು ಕರಾಚಿ, ಹಾಗೂ ಕಾಬೂಲಿನಲ್ಲಿ ನೆಲೆಗೊಂಡಿವೆ ಎಂದರು.

### ಪಾನಪ್ರತಿಬಂಧ ವಿಸ್ತರಣೆ ಬೇಡ

ಬೆಂಗಳೂರಿನಲ್ಲಿ ಸಮಾವೇಶವಾಗಿರುವ ವಿಧಾನಪರಿಷತ್ತಿನಲ್ಲಿ ನಿನ್ನೆ ಶ್ರೀ ಎ ಆರ್ ನಾಯಿಡು ರವರು ಮಾತನಾಡುತ್ತಾ, ದೇಶದ ಆರ್ಥಿಕ ಪರಿಸ್ಥಿತಿ ಸುಧಾರಿಸುವವರೆಗೆ ಪಾನಪ್ರತಿಬಂಧ ವಿಸ್ತರಿಸದಿರುವಂತೆ ತಿಳಿಸಿದರು.

## ಮಹೇಂದ್ರರ ಆಗಮನ

ಏಪ್ರಿಲು 18 ರಂದು ನೇಪಾಳದ ದೊರೆ ಮಹೇಂದ್ರರು ದೆಹಲಿಗೆ ಭೇಟಿ ಕೊಡುವರೆಂದು ನಿನ್ನೆ ದೆಹಲಿ ಮತ್ತು ಖಟಮಂಡುವಿನಲ್ಲಿ ಪ್ರಕಟಿಸಲಾಯಿತು. ದೊರೆಗಳ ಭೇಟಿ ಐದಾರು ದಿನಗಳಿಷ್ಟಿರಬಹುದು ಎಂದು ನಿರೀಕ್ಷಿಸಲಾಗಿದೆ. ಎರಡು ರಾಷ್ಟ್ರಗಳ ಸಂಬಂಧಪಟ್ಟಂತೆ ಬಂಡಿತ ಮಾತುಕತೆಗಳ ವಿನಿಮಯ ಈ ಭೇಟಿಯಿಂದ ಆಗುವದು.

× ಈಗ ಮಾಡಿರುವ ಸಕ್ಕರೆ ಉತ್ಪಾದನೆಯಲ್ಲಿ ಶೇಕಡ 10 ರಷ್ಟು ಕಡಿತದಿಂದ ಸಕ್ಕರೆ ಪರಿಸ್ಥಿತಿ ಹದಕ್ಕೆ ಬರುವುದೆಂದು ಸರ್ಕಾರದ ಅಭಿಪ್ರಾಯವಾಗಿದೆ ಎಂದು ಭಾರತ ಸರ್ಕಾರದ ಆಹಾರ ಮಂತ್ರಿ ಶ್ರೀ ಎಸ್ ಕೆ ಪಾಟೀಲರು ನಿನ್ನೆ ಲೋಕಸಭೆಯಲ್ಲಿ ತಿಳಿಸಿದರು ಆ ಬ್ಯಾರಿ ತೆರಿಗೆಯಿಂದ ವಾರ್ಷಿಕ ವಿನಾಯಿತಿ ಸಕ್ಕರೆ ಬೆಲೆಯನ್ನು ಒಳಪ್ರದೇಶದಲ್ಲಿ ಇಳಿಸುವುದಿಲ್ಲ ಎಂದರು

× ಡಮಾಸ್ಕಸಿನಿಂದ ಬಂದಿರುವ ವಂದಿ ಪ್ರಕಾರ ಸಿರಿಯಾದ ಆಡಳಿತವನ್ನು ಅಲ್ಲಿರುವ ಸೇನೆ ವಶಮಾಡಿಕೊಂಡಿದೆ ಸಿರಿಯಾದ ಅಧ್ಯಕ್ಷರು ಮತ್ತು ಮಂತ್ರಿ ಮಂಡಲ ರಾಜೀನಾಮೆ ಇತ್ತಿದೆ. ಪ್ರಕಟಣೆ ಮಾಡಿನವರಿಗೆ ಸಿರಿಯಾ ಗಡಿ ಒಂದಾಗಿರುವದು.

× ಭಾರತ ಬಲವಾದ ಪ್ರತಿಭಟನೆಗಳನ್ನು ಮಾಡಿದಾಗ್ಯೂ, ಕಾಶ್ಮೀರದಲ್ಲಿ ಕಲ್ಲು ಪುಲಿ ವಿದ್ಯುತ್ಸ್ಥಾವನ್ನು ನಿರ್ಮಿಸುವ ಸಂದರ್ಭದಲ್ಲಿ ವಿಸ್ತೃತ ಉದ್ಘಾಟನಾ ಸಮಾರಂಭ ಏರ್ಪಾಟಾಗಿದೆ. ಇದೇ ತಿಂಗಳ 31 ನೆಯ ತಾ|| ಉದ್ಘಾಟನೆ.

× ಜಿನೀವಾ ನಿಶ್ಶಸ್ತ್ರೀಕರಣ ಸಮ್ಮೇಳನದಲ್ಲಿ ಭಾರತದ ಪ್ರತಿನಿಧಿ ಶ್ರೀ ಎಂ ಜೆ ದೇಸಾಯರು ಮಾತನಾಡುತ್ತಾ, ಅಣುಶಸ್ತ್ರ ನಿಷೇಧಕ್ಕೆ ಪ್ರಾಶಸ್ತ್ಯ ಕೊಡಬೇಕು ಎಂದರು.

### ನಾಳೆಯ ಪಂಚಾಂಗ

ಅಸ್ಥಾನ ಮಹಾವಿದ್ವಾನ್ ದರ್ಮಾಧಿಕಾರಿ
ದೈವಜ್ಞಶಿರೋಮಣಿ
ಪಂಪಕ್ಕಯ್ಯನ್ನಜೋಯಿಸರಿಂದ

30 ನವಮಿ ಉತ್ತರಾಷಾಢ

## ವಿವಿಧ ವಾರ್ತೆಗಳು

ನವದೆಹಲಿ 27 - ಭಾರತ ಸರಕಾರದಿಂದ ಅಣುಶಕ್ತಿ ಶಾಖೆಯು ತನ್ನ ಬಳಿಕೆಗೆ ಬೇಕಾದಷ್ಟು ಪ್ರಮಾಣದ ಅಥಿಯಂ ಅದಿರನ್ನು ಈಗಾಗಲೇ ಕೊಂಡಿರುವುದರಿಂದ ಇನ್ನು ಕೊಳ್ಳುವುದನ್ನು ಕೂಡಲೇ ನಿಲ್ಲಿಸಲು ನಿರ್ಧರಿಸಿದೆ.

ನವದೆಹಲಿ 28— ಭಾರತವು ಜಿಕೋಸ್ಲವೇಕಿಯಾದ ರಾಜಧಾನಿ ಪ್ರಾಗ್‌ನಲ್ಲಿ ನಡೆಯುವ ಚಲಚಿತ್ರೋತ್ಸವದಲ್ಲಿ ಭಾಗವಹಿಸಲು ಉದ್ದೇಶಿಸಿದೆ.

ನವದೆಹಲಿ 28— ಗೋವಾದಲ್ಲಿ ಟೆಲಿಕಮ್ಯೂನಿಕೇಷನ್ ಸಂಪರ್ಕ ಸಾಧನಗಳನ್ನು ಅಭಿವೃದ್ಧಿ ಪಡಿಸುವ ಮತ್ತು ದೇಶದ ಇತರ ಭಾಗಗಳ ಜೊತೆಗೆ ಗೋವಾದ ಸಂಪರ್ಕ ವ್ಯವಸ್ಥೆಯನ್ನು ಅಭಿವೃದ್ಧಿಗೊಳಿಸುವ ಕಾರ್ಯಕ್ರಮದ ಅಂಗವಾಗಿ ಮುಂಬೈ ಮತ್ತು ಪಂಜಿಂಗಳ ಮಧ್ಯೆ ರೇಡಿಯೋ ಟೆಲಿಪ್ರಿಂಟರು ಸರ್ಕ್ಯೂಟು ವ್ಯವಸ್ಥೆಯನ್ನು ಏರ್ಪಡಿಸಲಾಗಿದೆ

ನವದೆಹಲಿ 28 — ಉತ್ತರ ಭಾರತದಲ್ಲಿ ಅಣುತಕ್ತಿಯಿಂದ ವಿದ್ಯುಚ್ಛಕ್ತಿ ಶಕ್ತಾರಿಸುವ ಕೇಂದ್ರ ಸ್ಥಾಪನೆಗೆ ಯೋಗ್ಯ ಸ್ಥಳವನ್ನು ಸೂಚಿಸಲು ಸರ್ಕಾರದ ನೇಮಿಸಿದ್ದ ಪ್ರಾಧಿಕಾರಂ ಸವಿತಿಯು ಅಣುಶಕ್ತಿ ಇಲಾಖೆಗೆ ತನ್ನ ವರದಿ ಒಪ್ಪಿಸಿದೆಯೆಂದೂ ಇದು ಸರ್ಕಾರದಿಂದ ಪರಿಶೀಲನೆಯಲ್ಲಿದ್ದು ಸಧ್ಯದಲ್ಲೇ ನಿರ್ಣಯ ಕೈಗೊಳ್ಳಲಾಗುವುದೆಂದೂ ಲೋಕಸಭೆಯಲ್ಲಿ ತಿಳಿಸಲಾಯಿತು.

## ಪುರಂದರ ದಾಸರು ಕಂಡ ಲೋಕದ ರೀತಿನೀತಿಗಳು

— ಭಕ್ತಿಯಿಲ್ಲದೆ ಕಥೆ ಕೇಳುವವರು —

ಹರಿಕಥಾಶ್ರವಣವನ್ನು ಮಾಡದೇ ಇದ್ದ ಜನರು ಕೆಲವೊಮ್ಮೆ ಹರಿಕಥೆ ಕೇಳುವ ಪ್ರಸಂಗವು ಒದಗಬಹುದು : ಆದರೆ ಅದನ್ನು ಕೇಳಲು ನೆರೆದಾಗ ಅವರ ಬೇರೆ ರೀತಿ ಪುರಾಣಕ್ಕೆ ಸಾದುಕಾಳ್ಗಳಾಗುತ್ತಾರೆ : ಅವರ ಲಕ್ಷ್ಯವು ಹರಿಕಥೆಯ ಮೇಲಿರುವುದಿಲ್ಲ : ಕೆಲವರು ನೆಲ್ಲು ಒಣಗಲಿಲ್ಲ, ಹಲ್ಲು ನೋವು ಬಲವಾಗಿದೆ, ತಮ್ಮ ಕೈಯಿಂದ ಕಲ್ಲು ಎತ್ತಲು ಸಾಧ್ಯವಿಲ್ಲ, ಎಂದು ಹೇಳಿ, ಹರಿಕಥೆಯನ್ನು ಸಂಪೂರ್ಣವಾಗಿ ಕೇಳದೆ, ಕರುವು ಕಲ್ಲಿನ ದನದ ಹಾಲನ್ನು ಬಯಸುವಂತೆ, ಅಲ್ಲಿಗೆ ಬಂದವರಿರುತ್ತಾರೆ : ಅಲ್ಲಿ ನೆರೆದಿದ್ದಾಗಲೆ ಪಂಸಿಂದೆಯನ್ನು ಬಡದೆ ಮಾತಾಡುತ್ತಾ, ವಸೆಯು ಏಗಿಲನ್ನು ಹಾಕಲು ಮರೆತೆವೆಂದೂ, ಕರುವನ್ನು ಕಟ್ಟಲಿಕ್ಕೆ ಮರೆತೆವೆಂದೂ ತಮ್ಮ ಪುರಾಣವನ್ನು ಬಿಚ್ಚುತ್ತಾರೆ ; ಹೆಂಗಸರು ಗಂಡನ ಮೂರ್ಖತನವನ್ನು ದೂಂಶ್ಯ ಮಕ್ಕಳ ತಲೆಯಲ್ಲಿ ಹೇನನ್ನು ಹುಡುಕುತ್ತಾ, ಹರಿಕಥೆಯನ್ನು ಸಂಪೂರ್ಣವಾಗಿ ಕೇಳದೆ ಕಾಲಿತಿರುಗುತ್ತಾರೆ


# SHAKTI SUDHA

A Superb Tonic



## Help The 'Gorakshana'

ಗೋರಕ್ಷಣ ಪತ್ರಿಕೆಯ ಕಾರ್ಯಗಳು ಹೆಚ್ಚಿಬರುತ್ತಿವೆ



# ವುಡ್‌ಲ್ಯಾಂಡ್ಸ್ ವೈಭವ 7 ನೇ ವಾರ

## ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆನ್

ಸಂಗೀತ— ಶಂಕರ್-ಜೈಕಿಶನ್ [ ದಿನವಹಿ 3 ಪ್ರದರ್ಶನಗಳು ]

## ಅಪೆರಾ— 23-3-62 ರಿಂದ

## ಶಾರದ (ತಮಿಳು)

ಪಾತ್ರ— ಎಸ್ ವಿ ರಂಗರಾವ್, ಎಂ ಆರ್ ರಾಧ, ಎಸ್ ಎಸ್ ರಾಜೇಂದ್ರನ್ ಪಾರಂಗಪಾಣಿ, ಎಂ ವಿ ರಾಜಮ್ಮ, ಸಂಧ್ಯ, ಮುಕ್ತುಲಕ್ಷ್ಮಿ

ರಾಜಧಾನಿಯಲ್ಲಿ ಪ್ರಪ್ರಥಮ ಪ್ರದರ್ಶನ [ ದಿನವಹಿ 3 ಆಟಗಳು ]



## "ಗೋರಕ್ಷಣ" ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ.

ಗೋರಕ್ಷಣ ಪತ್ರಿಕೆಗೆ ಸಹಾಯಧನವನ್ನು ಮತ್ತು ಪ್ರಕಟಿಸಲು ಅನುಕೂಲವಾದ ಲೇಖನಗಳನ್ನೂ ವಾರ್ತೆ ಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ : ಗೋರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು




ಇದುವೆಸ್ಟ್ ಕರ್ಮಾಗಾರದಲ್ಲಿ 1962 ರೊಸೆಯಲ್ಲಿ ತಯಾರಿಸಬೇಕಾಗಿದ್ದ ೪೮ ಮೋಟಾರು ಸೈಕಲುಗಳನ್ನು ಈಗಾಗಲೇ ತಯಾರಿಸಿದ್ದಾರೆ


Edited, Printed & Published by the Proprietor, Dharma Prachara Nirata M. S. Krishna Rao, at the Satyavadi Press Chamarajapuram, Mysore 4.